CW-12
PW-07

**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಯಚೂರು.**

ಸ್ಪೇಷಲ್ .ಕೇಸ್(ಎಸ್.ಸಿ./ಎಸ್.ಟಿ.) ಸಂಖ್ಯೆ 01/2026

ದಿ. 07-07-2026

(ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು )

ಚಾಸಾ-12
ಪ್ರಾಸಾ-07

| | |
|---|---|
| ಸಾಕ್ಷಿದಾರರ ಹೆಸರು | ತುಷಾರ್ |
| ತಂದೆಯ ಹೆಸರು | ವಿನೋದ |
| ವಯಸ್ಸು | 24 ವರ್ಷ |
| ಉದ್ಯೋಗ | ವ್ಯಾಪಾರ |
| ವಾಸಸ್ಥಳ | ರಾಯಚೂರು |

**ಮುಖ್ಯ ವಿಚಾರಣೆಃ ಸಾರ್ವಜನಿಕ ಅಭಿಯೋಜಕರಿಂದಃ-**

1. ನನಗೆ ಚಾಸಾ-1, 6, ರಿಂದ 11 ರವರು ಗೊತ್ತು. ನಾವು ನಾಯಕ ಜನಾಂಗಕ್ಕೆ ಸೇರಿದವರು. ಆರೋಪಿತರು ಕಬ್ಬೇರು ಜಾತಿಗೆ ಸೇರಿದವರು. ನಮಗೂ ಮತ್ತು ಆರೋಪಿತರ ನಡುವೆ ಯಾವುದೇ ಗಲಾಟೆಯಾಗಿಲ್ಲ. ಆರೋಪಿತರು ನಮಗೆ ಅವಾಚ್ಯ ಶಬ್ದಗಳಿಂದ ಬೈದಿಲ್ಲ. ಕೊಲೆ ಮಾಡುವ ಉದ್ದೇಶದಿಂದ ನಮಗೆ ಹೊಡೆದಿರುವುದಿಲ್ಲ. ಈ ಪ್ರಕರಣದ ಬಗ್ಗೆ ನನಗೇನು ಗೊತ್ತಿಲ್ಲ. ಆರೋಪಿತರು ಜಾತಿನಿಂದನೆ ಮಾಡಿ ಬೈದಿರುವುದಿಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ. ನಾನು ನನ್ನ

ಮೊಬೈಲನ್ನು ಯಾವುದೇ ಘಟನೆಯ ವಿಡಿಯೋವನ್ನು ಮಾಡಿಕೊಂಡಿರುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ವಿಶೇಷ ಅಭಿಯೋಜಕರು ಕೋರಿದ್ದಾರೆ. ಅದರಂತೆ ಸಾಕ್ಷಿಯನ್ನು ಪ್ರತಿಕೂಲ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ವಿಶೇಷ ಅಭಿಯೋಜಕರಿಗೆ ಅನುಮತಿ ನೀಡಲಾಗಿದೆ.)**

**ಪಾಟೀ ಸವಾಲುಃ ಸಾರ್ವಜನಿಕ ಅಭಿಯೋಜಕರಿಂದ**

2. ದಿಃ 01-09-2025 ರಂದು, ಬೆಳಿಗ್ಗೆ 10-30 ಗಂಟೆ ಸಮಯದಲ್ಲಿ ನಾನು ಮತ್ತು ಚಾಸಾ-1, 6, ರಿಂದ 11 ರವರು ಸೇರಿಕೊಂಡು ರಾಯಚೂರಿನ ಗಂಗಾನಿವಾಸದ ಗಣೇಶ್ ಕಟ್ಟೆಯ ಹತ್ತಿರ ಗಣೇಶನ ಮೂರ್ತಿಯ ಮೆರವಣಿಗೆಯನ್ನು ಮಾಡುತ್ತಾ ಹೋಗುತ್ತಿದ್ದಾಗ, ಈ ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿತರು ನಮ್ಮೊಂದಿಗೆ ಜಗಳ ತೆಗೆದು, ನಿಮ್ಮ ಓಣಿಯ ಗಣೇಶನನ್ನು ಈ ಕಡೆ ಯಾಕೆ ತರುತ್ತೀರಿ ಎಂದು ಗಲಾಗೆ ಮಾಡಿ ನಾಯಕ ಸೂಳೇಮಕ್ಕಳೇ ನಿಮ್ಮದು ಹೆಚ್ಚಾಗಿದೆ ಜಾತಿನಿಂದನೆ ಮಾಡಿರುತ್ತಾರೆಂದರೆ ಸರಿಯಲ್ಲ. ನಮಗೆ ಕೊಲೆ ಮಾಡುವ ಉದ್ದೇಶದಿಂದ 1 ಮತ್ತು 3 ನೇ ಆರೋಪಿತರು ಬಿಲ್ಡಿಂಗ್ ಮೇಲೆ ಏರಿ ನಮ್ಮ ಮೇಲೆ ಕಲ್ಲುಗಳನ್ನು ಏಸೆದಿರುತ್ತಾರೆಂದರೆ ಸರಿಯಲ್ಲ. ಮತ್ತು 2 ನೇ ಆರೋಪಿ ಲೈಟಿನ ಕಂಬದ ಬಳಿಯಿಂದ ನಮ್ಮ ಮೇಲೆ ಕಲ್ಲುಗಳನ್ನು ಏಸೆದಿರುತ್ತಾರೆಂದರೆ ಸರಿಯಲ್ಲ. ಆರೋಪಿತರು ಎಸೆದಿರುವ ಕಲ್ಲುಗಳಿಂದ ಚಾಸಾ-1 ಮತ್ತು 6 ರವರಿಗೆ ಹಣೆಗೆ,

CW-12
PW-07

ಕಿವಿಗೆ ಗಾಯಗಳಾಗಿರುತ್ತವೆ ಎಂದರೆ ಸರಿಯಲ್ಲ. ನಾನು ಗಲಾಟೆಯನ್ನು ನನ್ನ ಮೊಬೈಲಿನಿಂದ ವಿಡಿಯೋವನ್ನು ಚಿತ್ರಿಸಿಕೊಂಡಿರುತ್ತೇನೆಂದರೆ ಸರಿಯಲ್ಲ, ಅದನ್ನು Pendrive ಗೆ ಡೌನಲೋಡ್ ಮಾಡಿ ಅದನ್ನು ಚಾಸಾ-1 ರವರಿಗೆ ನೀಡಿರುತ್ತೇನೆಂದರೆ ಸರಿಯಲ್ಲ.

3. ಸಾಕ್ಷಿಯ ಹೇಳಿಕೆಯನ್ನು ಅಭಿಯೋಜನೆಯ ಪರವಾಗಿ ನಿಪಿ-16 ಎಂದು ಗುರುತಿಸಲಾಯಿತು. ಈಗ ಆರೋಪಿತರೊಂದಿಗೆ ರಾಜೀ ಮಾಡಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲು ಶ್ರೀ ಆರ್.ಕೆ. ವಕೀಲರಿಂದ ಆರೋಪಿತರ ಪರಃ**

ಏನೂ ಇಲ್ಲ ತಿಳಿಸಿರುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.

(ಮಾಲ ಎನ್.ಡಿ.)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ರಾಯಚೂರು.